ಕಥೆಯನ್ನು ರೋಚಕವಾಗಿಯೂ ಕುತೂಹಲ ಕೆರಳಿಸುವಂತೆಯೂ ಕಟ್ಟಿಕೊಡುವ ಕೌಶಲವನ್ನು '@ಕ್ಯಾಪ್ಟನ್ ಪ್ರತಾಪ್ ಮೋಹನ್ ಸರ್ಕಲ್' ಕಥೆಯಲ್ಲಿ ಕಾಣಬಹುದು. ಮೂಲ ಕಥೆಯ ಒಡಲೊಳಗೊಂದು ಚಿಕ್ಕ ಕಥೆ, ಆ ಚಿಕ್ಕ ಕಥೆಯೊಳಗೊಂದು ಉಪಕಥೆ, ಹಾಗೆಯೇ ಆ ಉಪಕಥೆಯೊಳಗೆ ಇನ್ನೊಂದು ನ್ಯಾನೋ ಕಥೆಯನ್ನು ಮಿಳಿತಗೊಳಿಸಿ ಕಥೆ ಹೇಳುವುದರ ಮೂಲಕ ಪ್ರಧಾನ ಕಥೆಯ ಆಶಯವನ್ನು ಓದುಗನಿಗೆ ದಾಟಿಸುವ ಬಗೆಯ ಕಥನ ತಂತ್ರವನ್ನು ಬಳಸಿರುವುದು ಕುತೂಹಲಕರವಾಗಿದೆ. ಈ ಕಥೆಯನ್ನು ಓದುವಾಗ ಕೆಲವರಿಗಾದರೂ ಬಾಲ್ಯದಲ್ಲಿ ಕೇಳಿದ 'ಬತ್ತೀಸ್ ಪುತ್ಥಳಿಯ ಕಥೆಗಳು' ನೆನಪಾಗದೇ ಇರಲಾರವು. ಇಲ್ಲಿ, ಒಂದು ಕಥೆಯ ಅಂತ್ಯವು ಇನ್ನೊಂದು ಕಥೆಯ ಪ್ರಾರಂಭಕ್ಕೆ ಕಾರಣವಾಗುತ್ತದೆ.

ಕ್ಯಾಪ್ಟನ್ ಪ್ರತಾಪ್ ಮೋಹನ್ ಅವರ ಕುಟುಂಬಕ್ಕೆ ಒಂದು ಇತಿಹಾಸವಿದೆ. ಶ್ರೀಮಂತ ಮನೆತನದಲ್ಲಿ ಹುಟ್ಟಿದ ಅವರ ತಂದೆ ರಾಮಮೋಹನ್ ಸ್ವಾತಂತ್ರ್ಯ ಹೋರಾಟಗಾರರು. ಚಲೇಜಾವ್ ಚಳವಳಿಯಲ್ಲಿ ಭಾಗವಹಿಸಿದವರು. ಮಿಲಿಟರಿಯಲ್ಲಿ ಕ್ಯಾಪ್ಟನ್ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ಪ್ರತಾಪ್ ಚೀನಾ–ಪಾಕಿಸ್ತಾನ ಜೊತೆಗಿನ ಯುದ್ಧಗಳಲ್ಲಿ ಸೇನೆಯನ್ನು ಮುನ್ನಡೆಸಿದವರು. ಅವರಿಗಿರುವ ದೇಶಪ್ರೇಮ ಮತ್ತು ವ್ಯವಸ್ಥೆಯ ಮೇಲಿನ ಕಾಳಜಿಗಳೆರಡೂ ಈ ಕಥೆಯ ಮುಖ್ಯಪಾತ್ರ ಜಗದೀಶನೊಂದಿಗೆ ನಡೆಯುವ ಮಾತುಕತೆಯಲ್ಲಿ ಬರುವ ಉಪಕಥೆಗಳು ಈ ಮಾತನ್ನು ಪುಷ್ಟೀಕರಿಸುತ್ತ ಹೋಗುತ್ತವೆ. ಕಥೆಗೆ ತಿರುವು ಬರುವುದು 'ಕ್ಯಾಪ್ಟನ್ ಪ್ರತಾಪ್ ಮೋಹನ್ ಸರ್ಕಲ್'ನಲ್ಲಿ ಶಶಿರೇಖಾ ಎಂಬ ಹುಡುಗಿಯ ಕೊಲೆಯಾಗುವುದರ ಮೂಲಕ. ಕೊಲೆ ಮಾಡಿದವನು ಚಂದ್ರಶೇಖರ ಎಂಬ ಶ್ರೀಮಂತ ವ್ಯಕ್ತಿ. (ಈತ ದೇಶದ್ರೋಹದ ಚಟುವಟಿಕೆಗಳಲ್ಲಿ ಪಾಲ್ಗೊಂಡ ವ್ಯಕ್ತಿಯೂ ಹೌದು!) ಕೊಲೆಗೆ ಕಾರಣವಾಗಿದ್ದು ಮದುವೆಯ ವಿಚಾರ! ಇದು ಸರ್ಕಲ್‌ನಲ್ಲಿ ಪ್ರತಿಮೆ ರೂಪದಲ್ಲಿ ನಿಂತಿದ್ದ ಕ್ಯಾಪ್ಟನ್ ಪ್ರತಾಪ್ ಮೋಹನ್‌ರ ಮನಸ್ಸನ್ನು ಕದಡುತ್ತದೆ. ಆಗ, ಜಗದೀಶನೊಂದಿಗೆ ಅವರ ಆತ್ಮ ಇಂಥ ಹೇಯ ಕೃತ್ಯಗಳ ವಿಚಾರದಲ್ಲಿ ಸಂವಾದಕ್ಕಿಳಿಯುತ್ತದೆ. ಇದರಿಂದಾಗಿ ಜಗದೀಶನು ಶಶಿರೇಖಾಳ ಆತ್ಮಕ್ಕೆ ನ್ಯಾಯ ದೊರಕಿಸಿಕೊಡಲು ಹೋರಾಟ ಮಾಡುತ್ತಾನೆ. ಕಥೆಯ ಅಂತ್ಯದಲ್ಲಿ ದುಷ್ಟರಿಗೆ ಶಿಕ್ಷೆಯಾಗುವುದಲ್ಲದೇ ಶೋಷಿತರಿಗೆ ನ್ಯಾಯ ಸಿಗುವಂತಾಗುತ್ತದೆ. ಈ ಕಥೆ ದೀರ್ಘವಾಗಿದೆ. ಕಥೆಯಲ್ಲಿ ಬರುವ ವಿಚಾರಗಳು ಹಳೆಯವೇ ಆದರೂ ಕಥೆಗೆ ಓದಿಸಿಕೊಳ್ಳುವ ಗುಣವಿದೆ.

ಕಥಾಸಂಕಲನದ ಶೀರ್ಷಿಕೆಯೂ ಹಾಗೂ ಮುಖಪುಟದ ಚಿತ್ರಕ್ಕೂ ಕಾರಣವಾಗಿರುವ 'ಹವೇಲಿ ದೊರೆಸಾನಿ' ಕಥೆಯು ತುಸು ದೀರ್ಘವಾಗಿದ್ದು, ಓದುಗನ ತಾಳ್ಮೆಯನ್ನು ಬೇಡುತ್ತದೆ. ಕಥೆಗಾರರು ನಾಡಿನಾದ್ಯಂತ ಉಳಿದುಕೊಂಡು ಬಂದಿರುವ ರಾಜವಾಡೆಗಳಿಗೆ ಭೇಟಿಕೊಟ್ಟು, ವಾಡೆಯಲ್ಲಿನ ಜನರ ಬದುಕನ್ನು ಅವಲೋಕಿಸಿ ಬರೆದ ಮಹತ್ವಾಕಾಂಕ್ಷೆಯ ಕಥೆ ಇದಾಗಿದೆ. ಸ್ವಾತಂತ್ರ್ಯಾನಂತರದಲ್ಲಿ ಬ್ರಿಟಿಷರಿಂದ ಬಳುವಳಿಯಾಗಿ ಬಂದ ಸಾವಿರಾರು ಎಕರೆ ಜಮೀನುಗಳೊಂದಿಗೆ ಆ ಜಮೀನ್ದಾರರ ವಾಡೆಗಳೊಂದಿಗೆ ಅಧಿಕಾರವೂ ಸಹ ಇಲ್ಲವಾಗಿ ಅವರ ಅಸ್ತಿತ್ವವೇ ಅಳಿಸಿ ಹೋಯಿತು ಎಂಬುದನ್ನು ಈ ಕಥೆ ಅನಾವರಣ ಮಾಡುತ್ತದೆ. ಒಂದು ಕಾಲಘಟ್ಟದ ರಾಜಕೀಯ ಚದುರಂಗದಾಟವನ್ನು ಕಣ್ಮುಂದೆ ತಂದು ನಿಲ್ಲಿಸುವುದರೊಂದಿಗೆ ಈ ಸಂದರ್ಭದ ರಾಜಕಾರಣ ಹಾಗೂ ರಾಜಕಾರಣಿಗಳ ಸಮಯಸಾಧಕತೆಯ ಗುಣಗಳೊಂದಿಗೆ ಮುಖಾಮುಖಿಯಾಗುತ್ತದೆ.

ಸಂಕಲನದಲ್ಲಿ 'ಅನ್ವಡ ಕಂಟೆವ್ವ' ಹಾಗೂ 'ಶಾಂವಕ್ಕನ ರೇಷ್ಮೆ ಸೀರೆ' ಕಥೆಗಳು ಅಕ್ಷರ ಸಂಸ್ಕೃತಿಯ ಮಹತ್ವವನ್ನು ಸಾರಿ ಹೇಳುತ್ತವೆ. ಕಂಟೆವ್ವ ಮತ್ತು ಶಾಂವಕ್ಕ ಶಿಕ್ಷಣಕ್ಕಾಗಿ ತ್ಯಾಗವನ್ನು ಮಾಡಿದವರೇ ಆಗಿದ್ದಾರೆ. 'ಹವೇಲಿ ದೊರೆಸಾನಿ' ಸಂಕಲನದ ಕಥೆಗಳು ಈ ಹೊತ್ತಿನ ಲೋಕದ ಸಂಗತಿಗಳನ್ನು ಒಳಗೊಂಡಿರುವ ಕಾರಣದಿಂದಾಗಿ ತುಂಬಾ ಆಪ್ತವಾಗಿ ತಟ್ಟುತ್ತವೆ. ಆದರೆ, ಲೋಕಾನುಭವಗಳನ್ನು ಕಥೆಯೊಳಗೆ ತರುವಾಗ ನಮ್ಮ ಆಲೋಚನೆಗಳಿಗೆ ಹೊಳಪು ತಾರದೇ ಹೋದಾಗ ಅದೊಂದು ವರದಿಯಾಗುವ ಅಪಾಯವನ್ನೂ ಎದುರಿಸಬೇಕಾಗುತ್ತದೆ. ಯಾವತ್ತಿಗೂ ಸೃಜನಶೀಲತೆಯು ತಾಳ್ಮೆ, ಎಚ್ಚರ ಮತ್ತು ಸಂಯಮವನ್ನು ಬೇಡುತ್ತದೆ. ಅದು ಕಥೆಯಾದರೂ ಸರಿಯೇ ಕವಿತೆಯಾದರೂ ಸರಿಯೇ ಎಂಬ ಮಾತನ್ನು ಇಲ್ಲಿನ ಕಥೆಗಳು ಮತ್ತೆ ಮತ್ತೆ ನೆನಪಿಸುತ್ತವೆ. ●